ಅ) ಹೊಸದಾಗಿ ಎಲ್ಲೆಲ್ಲಿ ಸಾರಿಗೆ ಡಿಪೋಗಳನ್ನು ಪ್ರಾರಂಭ ಮಾಡಲು ನಿರ್ಧರಿಸಲಾಗಿದೆ;

ಇ) ಹಿಂದುಳಿದ ಗಡಿ ಪ್ರದೇಶದ ಚಾಮರಾಜ ನಗರದಲ್ಲಿ ಸಾರಿಗೆ ಡಿಪೋ ಆರಂಭ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ;

ಈ) ಹಾಗಿಲ್ಲವಾದ್ದಲ್ಲಿ ಯಾವಾಗ ಆರಂಭ ಮಾಡಲಾಗುವುದು;

ಉ) ಚಾಮರಾಜ ನಗರಕ್ಕೆ ಬಸ್ಸುಗಳು ತೀವ್ರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಈ ಕೊರತೆಯನ್ನು ನೀಗಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಈವರೆಗೂ ಕ. ರಾ. ರ. ಸಾ. ಸಂಸ್ಥೆ 106 ಘಟಕಗಳನ್ನು ಸ್ಥಾಪಿಸಿರುತ್ತದೆ.

ಆ) ಕ. ರಾ. ರ. ಸಾ. ಸಂಸ್ಥೆ ಸಂಚಾರ ಕಾರ್ಯಾಚರಣೆಯ ಅನುಕೂಲಕ್ಕಾಗಿ ಶ್ರೀನಿವಾಸಪುರ, ಬಾಗೇಪಲ್ಲಿ, ದೊಡ್ಡಬಳ್ಳಾಪುರ, ವೈಟ್‌ಫೀಲ್ಡ್, ಚೆನ್ನಪಟ್ಟಣ, ಶಿರಾ ಮಾಲೂರು, ಹುಣಸೂರು, ಸವನೂರು, ಔರಾದ್, ರಾಯಬಾಗ್, ಬೆಂಗಳೂರು (5 ಘಟಕಗಳು ಬೆಂಗಳೂರು ನಗರ ಸಾರಿಗೆಗೆ), ಮುದೋಳ ಮತ್ತು ರಾಮನಾಥಪುರ ಮತ್ತು ಹೆಚ್ಚುವರಿಯಾಗಿ ಈ ಜೊತೆಗೆ ಬಿಜಾಪುರ, ರಾಯಚೂರು ಮತ್ತು ಗುಲ್ಬರ್ಗದಲ್ಲಿ ಘಟಕಗಳನ್ನು ಸ್ಥಾಪಿಸಲು ನಿರ್ದರಿಸಲಾಗಿದೆ.

ಇ) ಚಾಮರಾಜನಗರ ವ್ಯಾಪ್ತಿಯು ರಾಷ್ಟ್ರೀಕರಣಗೊಂಡಿರುವುದಿಲ್ಲವಾದ್ದರಿಂದಲೂ ಹಾಗೂ ಈ ವ್ಯಾಪ್ತಿಯನ್ನು ಕೂಡಲೇ ರಾಷ್ಟ್ರೀಕರಣ ಮಾಡುವ ಉದ್ದೇಶವಿಲ್ಲವಾದ್ದರಿಂದ ಪ್ರಸ್ತುತ ಚಾಮರಾಜನಗರದಲ್ಲಿ ಘಟಕವನ್ನು ಸ್ಥಾಪಿಸುವ ಉದ್ದೇಶವಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಇಲ್ಲ, ಚಾಮರಾಜನಗರ ತಾಲ್ಲೂಕು ರಾಷ್ಟ್ರೀಕರಣಗೊಂಡಿರುವುದಿಲ್ಲ ಹಾಗೂ ಈ ವ್ಯಾಪ್ತಿಯಲ್ಲಿ ಖಾಸಗೀಯವರು ಕಾರ್ಯಾಚರಣೆ ಮಾಡುತ್ತಿದ್ದಾರೆ.

ಊ) ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ರೋಗ ತಗುಲಿ ತೆಂಗಿನ ಬೆಳೆಗೆ ಹಾನಿ

613 (955) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯರಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಬಹುತೇಕ ಕಡೆ ತೆಂಗಿನ ತೋಟಕ್ಕೆ ರೋಗ ತಗುಲಿ ತೆಂಗಿನ ಬೆಳೆವಣಿಗೆಗೆ ಅಪಾಯ ಒದಗಿದೆ, ರೋಗ ನಿವಾರಣೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಅ) ಇದುವರೆವಿಗೂ ರಾಜ್ಯದಲ್ಲಿ ಎಷ್ಟು ಕಡೆ ಈ ರೋಗವು ತಗುಲಿದೆ;

ಇ) ಹೂ ಬೇಸಾಯ ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ನಮ್ಮ ರಾಜ್ಯದಲ್ಲಿ ತೆಂಗನ್ನು ಕಪ್ಪು ತಲೆ ಹುಳು, ರಸಸೋರುವ ರೋಗ ಹಾಗೂ ಅಣಬೆ ರೋಗಗಳು ಬಾಧಿಸುತ್ತವೆ. ಕಪ್ಪುತಲೆ ಹುಳುವಿನ ನಿಯಂತ್ರಣಕ್ಕಾಗಿ ತೋಟಗಾರಿಕೆ ಇಲಾಖೆ ವಿವಿಧ ಯೋಜನೆಗಳಡಿ ಜೈವಿಕ ನಿಯಂತ್ರಣ ಕ್ರಮ ಹಾಗೂ ರಾಸಾಯನಿಕ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುತ್ತಿದೆ. ಜೈವಿಕ ನಿಯಂತ್ರಣ ಕ್ರಮವಾಗಿ ಇಲಾಖಾ ಪ್ರಯೋಗಶಾಲೆಗಳಲ್ಲಿ ಪರೋಪಜೀವಿಗಳನ್ನು ಉತ್ಪಾದಿಸಿ ರೈತರಿಗೆ ಉಚಿತವಾಗಿ ಒದಗಿಸಲಾಗುತ್ತಿದೆ. ಕೀಟ ತೀವ್ರವಾದಲ್ಲಿ ಕೀಟನಾಶಕಗಳ ಸಿಂಪರಣೆ, ಬೇರಿನ ಉಪಚಾರಕ್ಕಾಗಿ ಕೀಟನಾಶಕಗಳನ್ನು ರಿಯಾಯಿತಿ ದರದಲ್ಲಿ ಸಹಾ ರೈತರಿಗೆ ಒದಗಿಸಿ ಸಸ್ಯ ಸಂರಕ್ಷಣಾ ತಂಡಗಳನ್ನು ರಚಿಸಿ ಸಾಮೂಹಿಕ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ರಸ ಸೋರುವ ರೋಗ ಹಾಗೂ ಅಣಬೆ ರೋಗಗಳ ನಿಯಂತ್ರಣಕ್ಕಾಗಿ ಅಗತ್ಯವಾದ ಶಿಲೀಂಧ್ರ ನಾಶಕಗಳನ್ನು ರಿಯಾಯ್ತಿ ದರಗಳಲ್ಲಿ ಒದಗಿಸಲಾಗುತ್ತಿದೆ. ತರುವಾಯ, ತೆಂಗು ಅಭಿವೃದ್ಧಿ ಮಂಡಳಿ ನೆರವಿನ ಯೋಜನೆಯಡಿ ತೀವ್ರ ರೋಗಭಾದೆ ಇರುವ ಪ್ರದೇಶಗಳಲ್ಲಿ ರೋಗಬಾಧೆಗೆ ತುತ್ತಾಗಿ ಅನುಪಯುಕ್ತ ಮರಗಳನ್ನು ತೆಗೆದುಕಹಾಕಲು, ಆ ಪ್ರದೇಶಗಳಲ್ಲಿ ಹೊಸ ಗಿಡಗಳನ್ನು ನಾಟಿ ಮಾಡಲು ರಸಗೊಬ್ಬರಕ್ಕಾಗಿ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

ಅ) ಕಪ್ಪು ತಲೆ ಹುಳುವಿನ ಬಾದೆ ರಾಜ್ಯದ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಾದ ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು, ಹಾಸನ, ಮಂಡ್ಯ, ಬೆಂಗಳೂರು (ನಗರ), ಬೆಂಗಳೂರು (ಗ್ರಾಮಾಂತರ) ಶಿವಮೊಗ್ಗ, ದಕ್ಷಿಣ ಕನ್ನಡ ಹಾಗೂ ಕೋಲಾರಗಳಲ್ಲಿ ರಸಸೋರುವ ಮತ್ತು ಅಣಬೆ ರೋಗಗಳು ತುಮಕೂರು ಚಿತ್ರದುರ್ಗ ಚಿಕ್ಕಮಗಳೂರು ಹಾಸನ ಮಂಡ್ಯ, ಹಾಗೂ ಮೈಸೂರು ಜಿಲ್ಲೆಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿದೆ. ಸಕಾಲಿಕ ನಿಯಂತ್ರಣ ಕ್ರಮಗಳನ್ನು ಕೈಗೊಂಡು ನಿಯಂತ್ರಿಸಲಾಗುತ್ತಿದೆ.

ಇ) ಹೂ ಬೇಸಾಯ ಅಭಿವೃದ್ಧಿ ಪಡಿಸಲು ತೋಟಗಾರಿಕೆ ಇಲಾಖೆಯು ಈ ಕೆಳಕಂಡ ಕ್ರಮಗಳನ್ನು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

(1) ಉತ್ತಮ ಗುಣಟ್ಟದ ಪುಷ್ಪಗಳನ್ನು ಉತ್ಪಾದಿಸಲು ಮೂಲಭೂತ ಸೌಕರ್ಯಗಳಾದ ಹಸಿರು ಮನೆ, ಹನಿ-ತುಂತುರು ನೀರಾವರಿ ಪದ್ಧತಿ ಮತ್ತು ಮಲ್ಚಿಂಗ್ ಅಳವಡಿಸಲು ಸಹಾಯ ಧನ ನೀಡಲಾಗುತ್ತದೆ.

(2) ಹೂವಿನ ಬೀಜ, ಸಸಿಗೆಡ್ಡೆ ಇತ್ಯಾದಿಗಳನ್ನು ವಿದೇಶಗಳಿಂದ ರೈತರು-ಸಸಂಸ್ಥೆಯವರು ಆಮದು ಮಾಡಿಕೊಳ್ಳಲು ಇಲಾಖೆ ವತಿಯಿಂದ ನೊಂದಣಿ ದೃಢೀಕರಣ ಪತ್ರವನ್ನು ನೀಡಲಾಗುತ್ತಿದೆ.

(3) ಹೂವಿನ ಬೇಸಾಯದಲ್ಲಿ ಪ್ರಾತ್ಯಕ್ಷತೆ, ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಬೇಸಾಯದ ಬಗ್ಗೆ ರೈತರಿಗೆ ತಾಂತ್ರಿಕೆ ಮಾಹಿತಿ ನೀಡಲಾಗುವುದು.

(4) ನಗರೂರಿನಲ್ಲಿ ಸ್ಥಾಪಿಸಿರುವ ಪ್ರಾಂತೀಯ ಪುಷ್ಪಭಿವೃದ್ಧಿ ಕೇಂದ್ರದಲ್ಲಿ ವಿವಿಧ ಉತ್ತಮ ಜಾತಿಯ ಹೂವಿ ಬೀಜ-ಸಸಿ- ಗೆಡ್ಡೆ ಮತ್ತು ಇತರೆ ಗಿಡಗಳನ್ನು ದೇಶಿಯ ಮತ್ತು ವಿದೇಶಿಗಳಿಂದ ತಂದು, ಅಭ್ಯಾಸಿಸಿ, ವೃದ್ಧಿಗೊಳಿಸಿ, ಬೆಳೆಗಾರರಿಗೆ ವಿತರಿಸಲಾಗುವುದು.

ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಿರುವ ಮನೆಗಳು

614 (956) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಅವಾಸ್ ಯೋಜನೆಗಳ ಅಡಿಯಲ್ಲಿ ನಿರ್ಮಿಸಿದ ಮನೆಗಳೆಷ್ಟು?

ಆ) ಕೇಂದ್ರ ಸರ್ಕಾರವು ಈ ಬಗ್ಗೆ ಹೆಚ್ಚಿನ ಅನುದಾನ ನೀಡಿದ್ದಾರೆಯೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):

ಅ) 1995-96ನೇ ಸಾಲಿನಲ್ಲಿ ಆಶ್ರಯ, ಅಂಬೇಡ್ಕರ್, ಹಾಗೂ ಇಂದಿರಾ ಅವಾಸ್ ಯೋಜನೆಯಡಿಯಲ್ಲಿ ನಿರ್ಮಿಸಿದ ಮನೆಗಳ ವಿವರ ಈ ಕೆಳಕಂಡಂತಿದೆ.

ಆಶ್ರಯ	-	17851
ಅಂಬೇಡ್ಕರ್	-	9650
ಇಂದಿರಾ ಅವಾಸ್	-	37460
ಒಟ್ಟು		64961

ಆ) ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳು ರಾಜ್ಯ ಸರ್ಕಾರದ ಕಾರ್ಯಕ್ರಮಗಳಾಗಿವೆ. ಇಂದಿರಾ ಅವಾಸ್ ಯೋಜನೆಯು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದೆ. 95-96ನೇ ಸಾಲಿಗೆ ನಿಗಧಿಪಡಿಸಿದ ಮನೆಗಳ ಸಂಖ್ಯೆ: 54129, ಇದಕ್ಕೆ ಕೇಂದ್ರ ಸರ್ಕಾರ ಶೇ 80 ರಷ್ಟು ಹಾಗೂ ರಾಜ್ಯ ಸರ್ಕಾರ ಶೇಕಡ 20 ರಷ್ಟು ಒಟ್ಟು ರೂ. 77.66 ಕೋಟಿ ಹಣವನ್ನು ಕೇಂದ್ರ: ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ.

ಕೃಷಿ ಮಾರುಕಟ್ಟೆಗಳ ವ್ಯವಹಾರ ಮತ್ತು ಅಲ್ಲಿಗೆ ಒದಗಿಸಿರುವ ಸೌಲಭ್ಯ

618 (958) ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?